**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ಮತ್ತು ಮಾನ್ಯ ಶ್ರೀ ಶಶೀಲ್ ಜಿ ನಮೋಶಿರವರು ಮಂಡಿಸಿರುವ ನಿಯಮ 330ರ ಸೂಚನೆಗೆ ಉತ್ತರ**

* * *

ವಿಷಯ:- ಸರಕಾರದ ಶಾಲಾ ಶಿಕ್ಷಣ ಇಲಾಖೆ, ಇತ್ತೀಚೆಗೆ ಪದವಿ ಪೂರ್ವ ಕಾಲೇಜುಗಳ ಮೇಲುಸ್ತುವಾರಿಯನ್ನು ಆಯಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ C.E.O ಮತ್ತು ಆಯಾ ವಿಭಾಗದ ಶಿಕ್ಷಣ ಇಲಾಖೆಯ ಅಪರ ಆಯುಕ್ತರಿಗೆ ವಹಿಸಿರುವ ಹಿನ್ನೆಲೆಯಲ್ಲಿ ಪದವಿ ಪೂರ್ವ ಹಂತಕ್ಕೆ ಆಗುವ ಸಾಧಕ ಭಾದಕಗಳ ಕುರಿತು ಪ್ರಸ್ತಾಪಿಸುವುದು.

**ಉತ್ತರ:**

ಶಾಲಾ ಶಿಕ್ಷಣ (ಪದವಿಪೂರ್ವ) ಇಲಾಖೆಯ ಜಿಲ್ಲಾ ಮಟ್ಟದ ಕಚೇರಿಯ ದೈನಂದಿನ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಮೇಲುಸ್ತುವಾರಿ ಮಾಡುವ ಅವಶ್ಯಕತೆ ಇರುವ ಕಾರಣ ಜಿಲ್ಲಾಮಟ್ಟದ ಮುಖ್ಯ ಅಧಿಕಾರಿಯಾದ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಇವರನ್ನು ಸಂಬಂಧಪಟ್ಟ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಇವರ ಮೇಲುಸ್ತುವಾರಿ ಸುಪರ್ದಿಗೆ ಮತ್ತು ಅದೇ ರೀತಿ ಧಾರವಾಡ ಹಾಗೂ ಕಲಬುರಗಿ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಇವರನ್ನು ಸಂಬಂಧಪಟ್ಟ ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಹಾಗೂ ಸಂಬಂಧಪಟ್ಟ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಇವರುಗಳ ಮೇಲುಸ್ತುವಾರಿಗೆ ವಹಿಸಿ ದಿನಾಂಕ: 18/10/2023ರ ಇಪಿ 67 ಟಿಪಿಯು 2023 ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಪದವಿ ಪೂರ್ವ ಕಾಲೇಜುಗಳ ಮೇಲುಸ್ತುವಾರಿಯನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಮತ್ತು ಅಪರ ಆಯುಕ್ತರಿಗೆ ವಹಿಸಲಾಗಿರುವುದಿಲ್ಲ. ಉಪನಿರ್ದೇಶಕರ ಕಚೇರಿಗಳಲ್ಲಿನ ದೈನಂದಿನ ಆಡಳಿತದ ಮೇಲುಸ್ತುವಾರಿಯನ್ನು ಮಾತ್ರ ಆಯಾ ವಿಭಾಗದ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಮತ್ತು ಸಂಬಂಧಿಸಿದ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ವ್ಯಾಪ್ತಿಗೆ ಒಳಪಡಿಸಲಾಗಿದ್ದು, ಸದರಿ ಸುತ್ತೋಲೆಯಿಂದ ಆಡಳಿತ ನಿರ್ವಹಣೆಯಲ್ಲಿ ಯಾವುದೇ ವಿಳಂಬ ಮತ್ತು ಗುಣಾತ್ಮಕ ಶಿಕ್ಷಣಕ್ಕೆ ತೊಂದರೆಯಾಗಿರುವುದಿಲ್ಲ.

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ಸಂಖ್ಯೆ: ಇಪಿ 240 ಡಿಜಿಡಬ್ಲ್ಯೂ 2023